

# ಶಾಲಾ ಹಂತದಲ್ಲಿ ಸ್ಕೌಟ್ಸ್ & ಗೈಡ್ಸ್ ಚಳವಳಿ ಒಂದು ಸಂಕ್ಷಿಪ್ತ ನೋಟ

– ಕೊಟ್ರೇಶ್ ಎಸ್. ಉಪ್ಪಾರ್, ಜಿಲ್ಲಾ ಸಂಘಟನಾ ಆಯುಕ್ತರು.(ಸ್ಕೌಟ್) ಸ.ಹಿ.ಪ್ರಾ.ಶಾಲೆ, ತಾಳೂರು, ಆಲೂರು ತಾ॥, ಹಾಸನ ಜಿಲ್ಲೆ) ಮೊ–9737878197.

## ಸಂಕ್ಷಿಪ್ತ ಪರಿಚಯ

**ಸ್ಕೌಟ್ ಚಳವಳಿ :** ಸ್ಕೌಟ್ ಚಳವಳಿ ವಿಶ್ವವ್ಯಾಪಿಯಾಗಿರುವ ಯುವ ಜನಾಂಗದ ಕೂಟವಾಗಿದೆ. ಈ ಚಳವಳಿಯ ಪ್ರಮುಖ ಉದ್ದೇಶ ಯುವ ಪೀಳಿಗೆಯನ್ನು ದೈಹಿಕವಾಗಿ, ಮಾನಸಿಕವಾಗಿ, ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಸದೃಢರನ್ನಾಗಿಸುವುದರ ಜೊತೆಗೆ ಸತ್ಪ್ರಜೆಗಳನ್ನಾಗಿ, ಸದ್ಗುಣಿಗಳನ್ನಾಗಿ, ವಿವೇಕಶೀಲರನ್ನಾಗಿ, ಸಹಿಷ್ಣುಗಳಾಗಿ, ವೈಶಾಲ್ಯ ಹೃದಯವಂತರನ್ನಾಗಿ ಮಾಡುವುದಾಗಿದೆ.

ಈ ಚಳವಳಿಯನ್ನು 1907 ರಲ್ಲಿ ನಿವೃತ್ತ ಸೈನ್ಯಾಧಿಕಾರಿಯಾಗಿದ್ದ ರಾಬರ್ಟ್ ಬೇಡನ್ ಪೊವೆಲ್ ಇಗ್ಲೆಂಡಿನಲ್ಲಿ ಗಂಡುಮಕ್ಕಳ ಸ್ಕೌಟ್ (ಬಾಯ್ ಸ್ಕೌಟ್)ಅನ್ನು ಪ್ರಯೋಗಾರ್ಥವಾಗಿ ಇಂಗ್ಲೆಂಡಿನ ಬ್ರೌನ್‌ಸೀ ದ್ವೀಪದಲ್ಲಿ 20 ಹುಡುಗರಿಗೆ ಕ್ಯಾಂಪ್ ರೀತಿಯಲ್ಲಿ ಪ್ರಾರಂಭಿಸಿದರು.

ಇದರ ಉಪಯುಕ್ತತೆ ಹಾಗೂ ಯಶಸ್ವಿಯನ್ನು ಮನಗಂಡ ಬೇಡನ್ ಪೊವೆಲ್‌ರವರು ಸ್ಕೌಟಿಂಗ್ ಫಾರ್ ಬಾಯ್ಸ್ ಎಂಬ ಸ್ಕೌಟ್ ಶಿಕ್ಷಣದ ವಿವರವಾದ ಪತ್ರವುಳ್ಳ 15 ದಿನದ ನಿಯತಕಾಲಿಕೆ ಪುಸ್ತಕವನ್ನು ಪ್ರಕಟಿಸಿದರು. ಇದೇ ಮುಂದಿನ ಸ್ಕೌಟ್ ಶಿಕ್ಷಣ ಮತ್ತು ಚಳವಳಿಗೆ ಚಾಲನೆ ನೀಡಿತು.

**ಗೈಡ್ ಚಳವಳಿ :** 1910 ರಲ್ಲಿ ಕ್ರಿಸ್ಟಲ್ ಪ್ಯಾಲೆಸ್ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಯಿತು. ಇದು ಸ್ಕೌಟ್ ಮಕ್ಕಳ ಕೂಟವಾಗಿತ್ತು. ಇದರಲ್ಲಿ ಹೆಣ್ಣುಮಕ್ಕಳೂ ಸ್ಕೌಟ್ ತೊಡಿಗೆಯೊಂದಿಗೆ ಬಂದಿದ್ದರು ಮತ್ತು ತಾವೂ ಭಾಗವಹಿಸುವುದಾಗಿ ಕೇಳಿದರು. ಪೊವೆಲ್ಲರ ಸಹೋದರಿ ಆಗ್ನೇಸ್ ಬೇಡನ್ ಪೊವೆಲ್‌ರ ನೇತೃತ್ವದಲ್ಲಿ ಗರ್ಲ್ ಗೈಡ್ ವಿಭಾಗವೂ ಆರಂಭವಾಯಿತು.

### ಭಾರತದಲ್ಲಿ ಸ್ಕೌಟ್ ಚಳವಳಿ :

1909 ರಲ್ಲಿ ನಿವೃತ್ತ ಕ್ಯಾಪ್ಟನ್ ಟಿ.ಎ.ಬೇಕರ್ ಎಂಬುವವರು ಬೆಂಗಳೂರಿನ ಬಿಶಪ್ ಕಾಟನ್ ಶಾಲೆಯಲ್ಲಿ ಒಂದು ಬಾಯ್ ಸ್ಕೌಟ್ ತಂಡವನ್ನು ಆರಂಭಿಸಿದರು. ಇದರ ಉಪಯುಕ್ತತೆ ಅರಿತ ಅನೇಕ ನಾಯಕರುಗಳ ಗಮನ ಸ್ಕೌಟ್ ಕಡೆ ಹೊರಳಿತು. ರಾಷ್ಟ್ರೀಯ ನಾಯಕರಾಗಿದ್ದ ಪಂಡಿತ ಮದನ ಮೋಹನ ಮಾಳವೀಯ ಸೇವಾ ಸಮಿತಿ ಸ್ಕೌಟ್ ಅಸೋಸಿಯೇಶನ್ ಅನ್ನು ಸ್ಥಾಪಿಸಿದರು. ನಂತರ ಡಾ. ಅನಿಬೆಸೆಂಟ್ ಚೆನ್ನೈನಲ್ಲಿ ಅಸೋಸಿಯೇಷನ್ ಫಾರ್ ಇಂಡಿಯನ್ ಬಾಯ್ಸ್ ಎಂಬ ಸಂಸ್ಥೆಯನ್ನು ಆರಂಭಿಸಿದರು. 1910 ರಲ್ಲಿ ಜಬ್ಬಲ್ಪುರದಲ್ಲಿ ಗರ್ಲ್ ಗೈಡ್ ಆರಂಭವಾಯಿತು. ಆದರೆ ಮೊದಮೊದಲು ಆಂಗ್ಲೋ ಇಂಡಿಯನ್ನರಿಗೆ ಸೀಮಿತವಾಗಿದ್ದ ಇದು ನಂತರ ಭಾರತೀಯ ಮಕ್ಕಳಿಗೂ ಶಿಕ್ಷಣ ದೊರೆಯುವಂತಾಯಿತು. 1027 ಹಾಗೂ 1037 ರಲ್ಲಿ ಬೇಡನ್ ಪೊವೆಲ್‌ರವರು ಭಾರತಕ್ಕೆ ಬಂದಾಗ ಈ ಸಂಘಟನೆಗಳನ್ನೆಲ್ಲಾ ಒಟ್ಟಾಗಿ ಸೇರಿಸಲು ಪ್ರಯತ್ನಿಸಿದರಾದರೂ ಫಲ ನೀಡಲಿಲ್ಲ.

ಭಾರತ 1947 ರಲ್ಲಿ ಸ್ವತಂತ್ರವಾದ ನಂತರ ಮೊದಲ ಪ್ರಧಾನಿ ಪಂಡಿತ ಜವಾಹರಲಾಲ್ ನೆಹರು ಹಾಗೂ ಶಿಕ್ಷಣ ಮಂತ್ರಿಯಾಗಿದ್ದ ಮೌಲಾನಾ ಅಬುಲ್ ಕಲಾಂ ಅಜಾದ್ ಮೊದಲಿದ್ದ ಎಲ್ಲಾ ಸಂಘಟನೆಗಳ ಮುಖ್ಯಸ್ಥರನ್ನು ಒಪ್ಪಿಸಿ 1950 ನವೆಂಬರ್ 07 ಒಂದು ಸಂಸ್ಥೆಯಾಗಿ ಒಗ್ಗೂಡಿಸಿದರು. 1951 ಆಗಸ್ಟ್ 15 ರಂದು ಗರ್ಲ್ ಗೈಡ್ ಸಂಸ್ಥೆಯೂ ಸಹ ಇದರೊಂದಿಗೆ ಸೇರಿತು.

ಭಾರತ್ ಸ್ಕೌಟ್ಸ್ & ಗೈಡ್ಸ್ ಎಂದು ನಾಮಕರಣಗೊಂಡ ಸಂಸ್ಥೆ ಸೊಸೈಟಿ ಕಾಯಿದೆ ಮತ್ತು ನಿಯಮಗಳ ಅಡಿಯಲ್ಲಿ ನೊಂದಾಯಿಸಲ್ಪಟ್ಟಿದೆ. ಅದರ ಮುಖ್ಯ ಕಾರ್ಯಾಲಯ 1963 ರವರೆಗೆ ದೆಹಲಿಯ ಕನ್ನಾಟ ಪ್ರದೇಶದಲ್ಲಿದ್ದು ನಂತರ ಲಕ್ಷ್ಮಿ ಮುಜುಮ್ದಾರ್ ಭವನ, 16 ಮಹಾತ್ಮ ಗಾಂಧಿ ಮಾರ್ಗ ಇಂದ್ರಪ್ರಸ್ಥ ಎಸ್ಟೇಟ್, ನವದೆಹಲಿ–110002 ಇಲ್ಲಿ ನಡೆಯುತ್ತಿದೆ.

### ಕರ್ನಾಟಕದಲ್ಲಿ ಸ್ಕೌಟ್ ಚಳವಳಿ

ಕರ್ನಾಟಕದಲ್ಲಿ ಸ್ಕೌಟ್ ಚಳವಳಿಯು ಮೈಸೂರು ಸಂಸ್ಥಾನದ ಒಡೆಯರಾಗಿದ್ದ ಶ್ರೀ ಕೃಷ್ಣದೇವರಾಜ ಒಡೆಯರ್ ಪೋಷಕತ್ವದಲ್ಲಿ 1917 ರಲ್ಲಿ 'ದ ಬಾಯ್ಸ್ ಸ್ಕೌಟ್ಸ್ ಆಫ್ ಮೈಸೂರ್' ಎಂಬ ಹೆಸರಿನಡಿಯಲ್ಲಿ ಪ್ರಾರಂಭವಾಯಿತು. ಇವರ ಸೋದರ ಯುವರಾಜರಾಗಿದ್ದ ಕಂಠೀರವ ನರಸಿಂಹರಾಜ ಒಡೆಯರ್ ರಾಜ್ಯ ಮುಖ್ಯಸ್ಥರಾಗಿದ್ದರು. ತಮ್ಮ ಆಡಳಿತದಲ್ಲಿರುವ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸ್ಕೌಟ್ಸ್ ಚಟುವಟಿಕೆಗಳನ್ನು ಆರಂಭಿಸಬೇಕೆಂದು ಮಹಾರಾಜರು 1917 ರ ಅಕ್ಟೋಬರ್ 03 ರಂದು ರಾಜಾಜ್ಞೆಯನ್ನು ಹೊರಡಿಸಿದರು. ಶ್ರೀ





ಜಯಚಾಮರಾಜ ಒಡೆಯರೂ ಬಾಲಕರಾಗಿದ್ದಾಗ ಸ್ಕೌಟಿನಲ್ಲಿ ಮುಖ್ಯ ಕಬ್ ಆಗಿದ್ದರು. ನಂತರ 1927 ರಲ್ಲಿ 'ದ ಬಾಯ್ಸ್ ಸ್ಕೌಟ್ಸ್ ಆಫ್ ಮೈಸೂರ್' ಸಂಸ್ಥೆಯ ಸೋದರ ಸಂಸ್ಥೆಯಾಗಿ 'ದ ಗರ್ಲ್ ಗೈಡ್ ಆಫ್ ಮೈಸೂರ್' ಎಂಬುದು ಸ್ಥಾಪನೆಯಾಯಿತು. ಮೊದಮೊದಲು ಇವೆರಡೂ ಸ್ವತಂತ್ರ್ಯವಾಗಿಯೇ ಕಾರ್ಯನಿರ್ವಹಿಸಿದರೂ 1951 ರಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಘಟನೆಯೊಂದಿಗೆ ವಿಲೀನವಾದವು.

ಕರ್ನಾಟಕ ರಾಜ್ಯ ಸಂಸ್ಥೆಯ ಕೇಂದ್ರ ಕಛೇರಿಯು ಪ್ರೊ.ಪಿ.ಶಿವಶಂಕರ್ ವೃತ್ತ, ಕೊಂಡಜ್ಜಿ ಬಸಪ್ಪ ರಸ್ತೆ ಕೋಟೆ, ಬೆಂಗಳೂರು–560002 ಇಲ್ಲಿದೆ. ಪ್ರಸ್ತುತ ಸನ್ಮಾನ್ಯ ಪಿ.ಜಿ.ಆರ್.ಸಿಂಧ್ಯ ಅವರು ರಾಜ್ಯ ಸಂಸ್ಥೆಯ ಪ್ರಧಾನ ಆಯುಕ್ತರಾಗಿದ್ದಾರೆ. ಇವರು ಈ ಚಳವಳಿಯ ನೇತೃತ್ವ ವಹಿಸಿಕೊಂಡ ನಂತರ ರಾಜ್ಯದಲ್ಲಿ ಸ್ಕೌಟ್ಸ್ & ಗೈಡ್ಸ್ ಚಳವಳಿ ಗಣನೀಯವಾದ ಬದಲಾವಣೆ ಕಂಡಿದೆ. ಸರಕಾರದಿಂದ ಸಾಕಷ್ಟು ಅನುದಾನಗಳನ್ನು ತರುವುದರ ಮೂಲಕ ಬನ್ನೀಸ್, ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್ & ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್ ವಿಭಾಗಗಳಿಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿಕೊಟ್ಟು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಬದಲಾವಣೆಯ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

### ಸ್ಕೌಟ್ಸ್ & ಗೈಡ್ಸ್ ಚಳವಳಿಯ ಹಂತಗಳು

**ಬನ್ನೀಸ್ :** ಬನ್ನೀಸ್ ವಿಭಾಗ ಸ್ಕೌಟ್ಸ್ & ಗೈಡ್ಸ್‌ನಲ್ಲಿ ಮೊದಲ ಮೆಟ್ಟಿಲು. ಈ ಚಳವಳಿಯಲ್ಲಿ 03 ವರ್ಷದಿಂದ 05 ವರ್ಷದೊಳಗಿನ ಮಕ್ಕಳಿಗೆ ನೀಡುವ ಶಿಕ್ಷಣವಾಗಿದೆ. ಇಲ್ಲಿ ಚಳವಳಿ ಎಂಬ ಪದದ ಬಳಕೆ ನಿರಂತರತೆಯನ್ನು ಸೂಚಿಸುತ್ತದೆ. ಬನ್ನೀಸ್ ವಿಭಾಗದಲ್ಲಿ ಯಾವುದೇ ಲಿಂಗಭೇದವಿಲ್ಲದೇ ಮಕ್ಕಳು ಇಲ್ಲಿ ಕಾರ್ಯಚಟುವಟಿಕೆಗಳಲ್ಲಿ ತೊಡಗುತ್ತಾರೆ. ಮೊಲದ ಚಿತ್ರವುಳ್ಳ ಏಪ್ರಾನ್ ಈ ಮಕ್ಕಳ ಸಮವಸ್ತ್ರವಾಗಿರುತ್ತದೆ. ಇಲ್ಲಿ ಹಾಡು, ಕುಣಿತ, ಆಟಗಳು ಬಹುಮುಖ್ಯದ ಪಠ್ಯವಾಗಿವೆ.

**ಕಬ್ಸ್ & ಬುಲ್ ಬುಲ್ಸ್ :** ಅಧಿಕೃತವಾಗಿ ನಮ್ಮ ಸ್ಕೌಟ್ಸ್ & ಗೈಡ್ಸ್ ಚಳವಳಿ ಪ್ರಾರಂಭವಾಗುವುದೇ ಕಬ್ಸ್ & ಬುಲ್ ಬುಲ್ಸ್ ನಿಂದ.

**ಕಬ್ (ಬಾಲಕ) & ಬುಲ್ ಬುಲ್ (ಬಾಲಕಿ) :** ಕಿರಿಯ ಪ್ರಾಥಮಿಕ ಹಂತವಾದ 01 ರಿಂದ 04 ನೆಯ ತರಗತಿವರೆಗಿನ ಅಂದರೆ ಐದು ವರ್ಷ ತುಂಬಿದ ಹತ್ತು ವರ್ಷ ತುಂಬದೆ ಇರುವ ಭಾರತ ರಾಷ್ಟ್ರದ ಪ್ರಜೆಯಾಗಿರುವ ಬಾಲಕನು 'ಮರಿ'ಯಾಗಲು ಅರ್ಹನು. ಇಲ್ಲಿ ಬಾಲಕನನ್ನು 'ಕಬ್' ಎಂದು ಕರೆಯುವರು. ಇವರಿಗೆ ತರಬೇತಿ ನೀಡುವ ಶಿಕ್ಷಕರಿಗೆ ಕಬ್ ಮಾಸ್ಟರ್ ಎಂದು ಕರೆಯುವರು. ಬಾಲಕಿಯರನ್ನು ಬುಲ್ ಬುಲ್ ಎಂದು ಕರೆಯುವರು. ಇಲ್ಲಿ ತಂಡವನ್ನು ಪ್ಯಾಕ್ ಎಂದು ಕರೆಯುವರು. ಒಂದು ಪ್ಯಾಕ್‌ನಲ್ಲಿ 24 ಮಕ್ಕಳು ಮಾತ್ರ ಇರಲು ಸಾಧ್ಯ. ಇಲ್ಲಿ ಪ್ರತ್ಯೇಕ ಗುಂಪುಗಳಿರುತ್ತವೆ. ಬಾಲಕರದ್ದೇ ಬೇರೆ, ಬಾಲಕಿಯರದ್ದೇ ಬೇರೆ. ಬಾಲಕಿಯರಿಗೆ ತರಬೇತಿ ನೀಡಲು ಕಡ್ಡಾಯವಾಗಿ ಮಹಿಳಾ ಶಿಕ್ಷಕರೇ ಆಗಬೇಕು. ಸ್ಕೌಟ್ಸ್ & ಗೈಡ್ಸ್ ಚಳವಳಿಯಲ್ಲಿ ಬಾಲಕಿಯರ ವಿಭಾಗಕ್ಕೆ ಪುರುಷ ಶಿಕ್ಷಕರಿಗೆ ಪ್ರವೇಶವಿಲ್ಲ. ಬಾಲಕರ ವಿಭಾಗಕ್ಕೆ ಮಹಿಳಾ ಶಿಕ್ಷಕರೂ ತರಬೇತಿ ಹೊಂದಿ ದಳ ಮುನ್ನಡೆಸಲು ಅವಕಾಶವಿದೆ. ಅಂಥವರಿಗೆ ಮಹಿಳಾ ಕಬ್ ಮಾಸ್ಟರ್ ಎಂದು ಕರೆಯುತ್ತೇವೆ. ಬಾಲಕಿಯರ ವಿಭಾಗದ ಶಿಕ್ಷಕರಿಗೆ ಫ್ಲಾಕ್ ಲೀಡರ್ಸ್ ಎಂದು ಕರೆಯುತ್ತೇವೆ. ಒಬ್ಬ ಮೂಲ ತರಬೇತಿ ಹೊಂದಿದ ಶಿಕ್ಷಕ ಒಂದು ಫ್ಲಾಕನ್ನು ಮಾತ್ರ ಮುನ್ನಡೆಸಬಹುದಾಗಿದೆ. ಇಲ್ಲಿ ಮಕ್ಕಳಿಗೆ ಪ್ರವೇಶ, ಪ್ರಥಮ ಚರಣ, ದ್ವಿತೀಯ ಚರಣ, ತೃತೀಯ ಚರಣ ಹಾಗೂ ಚತುರ್ಥ ಚರಣ ಎಂಬ ಶಿಕ್ಷಣದ ಹಂತಗಳಿವೆ.

**ಸ್ಕೌಟ್ & ಗೈಡ್:** ಹತ್ತು ವರ್ಷ ತುಂಬಿದ 17 ವರ್ಷದೊಳಗಿನ ಬಾಲಕರಿಗೆ ಸ್ಕೌಟ್ಸ್ ಎಂದು, ಬಾಲಕಿಯರಿಗೆ ಗೈಡ್ಸ್ ಎಂದು ಕರೆಯಲಾಗುತ್ತದೆ. ಇಲ್ಲಿನ ಮುಖ್ಯ ಧ್ಯೇಯ ಸದಾ ಸಿದ್ಧನಾಗಿರು. ಈ ಹಂತದಲ್ಲಿ ಬಾಲಕರಿಗೆ ತರಬೇತಿ ನೀಡುವ ಶಿಕ್ಷಕರಿಗೆ ಸ್ಕೌಟ್ ಮಾಸ್ಟರ್ ಎಂದೂ ಹಾಗೆಯೇ ಬಾಲಕಿಯರ ವಿಭಾಗಕ್ಕೆ ತರಬೇತಿ ನೀಡುವ ಶಿಕ್ಷಕಿಗೆ ಗೈಡ್ ಕ್ಯಾಪ್ಟನ್ ಎಂದು ಕರೆಯುವರು. ಒಂದು ವೇಳೆ ಬಾಲಕರಿಗೆ ಮಹಿಳಾ ಶಿಕ್ಷಕರು ತರಬೇತಿ ನೀಡುತ್ತಿದ್ದರೆ ಅವರಿಗೆ ಲೇಡಿ ಸ್ಕೌಟ್ ಮಾಸ್ಟರ್ ಎನ್ನುವರು. ಇಲ್ಲಿಯೂ ಕಬ್ಸ್ & ಬುಲ್ ಬುಲ್ಸ್‌ನಂತೆ ಪುರುಷ ಶಿಕ್ಷಕರು ಸ್ಕೌಟ್ಸ್‌ಗೆ ಮಾತ್ರ ಸೀಮಿತವಾಗಿರುವರು.

ಸ್ಕೌಟ್ & ಗೈಡ್‌ನಲ್ಲಿ ಮಕ್ಕಳ ಗುಂಪನ್ನು ದಳ(ಟ್ರೂಪ್) ಎಂದು ಕರೆಯುವರು. ಒಂದು ದಳದಲ್ಲಿ ಕನಿಷ್ಠ 12 ರಿಂದ ಗರಿಷ್ಠ 32 ವಿದ್ಯಾರ್ಥಿಗಳಿರುತ್ತಾರೆ. ಸ್ಕೌಟ್ಸ್ ಅಥವಾ ಗೈಡ್ಸ್ ದಳಗಳಲ್ಲಿ ತಲಾ ನಾಲ್ಕು ಪ್ಯಾಟ್ರೋಲ್‌ಗಳು ಇರುತ್ತವೆ. ಒಂದು ಪ್ಯಾಟ್ರೋಲ್‌ನಲ್ಲಿ 08 ವಿದ್ಯಾರ್ಥಿಗಳಿರುತ್ತಾರೆ. ಇಲ್ಲಿ ಶಿಕ್ಷಕ ಪ್ರತಿವಾರ ಒಂದು ಟ್ರೂಪ್

ಪುಟ: 67 ಕ್ಕೆ......